**<u>ಎಂಟನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಮೈಸೂರು, ಹುಣಸೂರು ಪೀಠ.</u>**

<u>**SC No**.302/2022</u>

**PW**. 11

**CW**. 11

**ಸಾಕ್ಷಿಯ ಹೆಸರು –ಡಾ ವಿಜಯಕುಮಾರ ಎ ಜಿ**

**ತಂದೆಯ ಹೆಸರು –ಎ ಗೋವಿಂದೇಗೌಡ**

**ವಯಸ್ಸು –42 ವರ್ಷಗಳು** ದಿನಾಂಕ **<u>06–03–2026</u>** ರಂದು ಪ್ರಮಾಣವಚನ ಬೋಧಿಸಲಾಯಿತು.

**ಉದ್ಯೋಗ –ವೈದ್ಯರು , ಸುಯೋಗ ಆಸ್ಪತ್ರೆ ಮೈಸೂರು**

**ವಾಸಸ್ಥಳ – ಮೈಸೂರು**

**<u>ಮುಖ್ಯ ವಿಚಾರಣೆಃ– ಸರ್ಕಾರಿ ಅಭಿಯೋಜಕರಿಂದಃ–</u>**

ನಾನು 2016 ರಿಂದ ಇಲ್ಲಿಯವರೆಗೆ ಸುಯೋಗ ಆಸ್ಪತ್ರೆ ಮೈಸೂರಿನಲ್ಲಿ ವೈದ್ಯರಾಗಿ ಸೇವೆ ಸಲ್ಲಿಸಿದ್ದೇನೆ.

ದಿಃ 12–04–2021 ರಂದು ಮಧ್ಯಾಹ್ನ 1.00 ಗಂಟೆಗೆ ನಾನು ಆಸ್ಪತ್ರೆಯಲ್ಲಿರುವಾಗ ಈ ಪ್ರಕರಣದ ಗಾಯಾಳು ಮಹದೇವ ಹಲ್ಲೆಯ ಹಿನ್ನೆಲೆಯಲ್ಲಿ ಚಿಕಿತ್ಸೆಗೆ ಬಂದಿದ್ದು , ಆತನನ್ನು ಪರೀಕ್ಷಿಸಿ ನೋಡಲಾಗಿ ಈ ಕೆಳಕಂಡ ಗಾಯಗಳು ಕಂಡುಬಂದಿರುತ್ತವೆ.

1. ತಲೆಯ ಹಿಂಭಾಗದ ಮಧ್ಯಭಾಗದಲ್ಲಿ ಹೊಲಿದ ಗಾಯ
2. ಎಡ ಮುಂಗೈನ ಮೂಳೆ ಮುರಿತ ಇದ್ದು , ಊತ ಇದ್ದು ನೋವು ಇರುತ್ತದೆ
3. ಎಡ ಮುಂಗೈ ಮೂಳೆಗಳು ಮುರಿದಿರುವುದು
4. ಬಲ ಮುಂಗೈ ಮೂಳೆಗಳು ಮುರಿದಿರುವುದು

ಸದರಿ ಗಾಯದ ಎಕ್ಸರೇ ತೆಗೆದು ನೋಡಲಾಗಿ ಎಡ ಮುಂಗೈ ಮತ್ತು ಬಲ ಮುಂಗೈ ಮೂಳೆಗಳು ಮುರಿದಿರುವುದು ಕಂಡುಬಂತು.

ಸದರಿ ಗಾಯಾಳುವನ್ನು ಶಸ್ತ್ರ ಚಿಕಿತ್ಸೆಗೆ ಒಳಪಡಿಸಿ ಚಿಕಿತ್ಸೆ ನೀಡಿದ್ದೇನೆ. ದಿಃ 15-04-2021 ರಂದು ನಮ್ಮ ಆಸ್ಪತ್ರೆಯಿಂದ ಬಿಡುಗಡೆಯಾಗಿದ್ದಾರೆ. ಆ ಬಗ್ಗೆ ಗಾಯದ ಪ್ರಮಾಣ ಪತ್ರವನ್ನು ನೀಡಿದ್ದೇನೆ. ಅದನ್ನು ಈಗಾಗಲೇ ನಿಪಿ-11 ಎಂದು ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ-11(ಬಿ) ಎಂದು ಗುರುತಿಸಲಾಯಿತು.

ಸದರಿ ಗಾಯಾಳು ಬಿಡುಗಡೆ ಹೊಂದಿರುವ ಬಗ್ಗೆ ಡಿಸಾರ್ಜ ಸಮರಿಯನ್ನು ಈ ದಿನ ನ್ಯಾಯಾಲಯದ ಮುಂದೆ ಹಾಜರು ಮಾಡುತ್ತಿದ್ದು, ಅದನ್ನು ಈಗ ನೋಡುತ್ತಿದ್ದು, ನಿಪಿ-15 ಎಂದು ಸಾಕ್ಷಿಯ ಸಹಿಯನ್ನು ನಿಪಿ-15(ಎ) ಎಂದು ಗುರುತಿಸಲಾಯಿತು. ಎಕ್ಸರೇ ಮಾಡಿದ ಬಗ್ಗೆ ಎಕ್ಸರೇ ಹಾಳೆಗಳು ಲಭ್ಯವಿಲ್ಲ.

ನನ್ನ ಅಭಿಪ್ರಾಯದಲ್ಲಿ ಒಂದನೇ ಗಾಯವು ಸಾದಾ ಸ್ವರೂಪದ ಗಾಯವಾಗಿದ್ದು , 2 ರಿಂದ 4 ನೇ ಗಾಯಗಳು ತೀವ್ರ ಸ್ವರೂಪದ ಗಾಯಗಳಾಗಿದ್ದವು. ಎಡ ಮುಂಗೈನ ಹಲವು ಮೂಳೆಗಳು ಮುರಿದಿದ್ದು, ಜೋಡಣೆ ತಪ್ಪಿರುತ್ತದೆ. ಮು.ಮಾ-1 ರಿಂದ 5 ದೊಣ್ಣೆಗಳಿಂದ ಹಲ್ಲೆ ಮಾಡಿದರೆ ನಿಪಿ-11 ರಲ್ಲಿ ನಮೂದು ಮಾಡಿರುವ ಗಾಯಗಳು ಆಗುವ ಸಾಧ್ಯತೆ ಇದೆ.

**<u>ಪಾಟೀಸವಾಲುಃ- ಆರೋಪಿತರ ಪರ ಶ್ರೀ ಎಸ್ ಪಿ ವಕೀಲರಿಂದಃ-</u>**

ಗಾಯಾಳು ಹಲ್ಲೆ ಮಾಡಿರುವರ ಹೆಸರುಗಳು ನನ್ನ ಮುಂದೆ ಹೇಳಿಲ್ಲ ಎಂದರೆ ಸರಿ . ಹರಿತವಾದ ಲೋಹದ ಆಯುಧಗಳು ಯಾವುದು ಎಂದು ನಿಖರವಾಗಿ ಗಾಯಾಳು ನನ್ನ ಮುಂದೆ ಹೇಳಿಲ್ಲ ಎಂದರೆ ಸರಿ . ಮು.ಮಾ-1 ರಿಂದ 5 ನ್ನು ನನ್ನ ಮುಂದೆ ಹಾಜರು ಮಾಡಿ ಅಭಿಪ್ರಾಯ ವರದಿ ಪಡೆದಿಲ್ಲ ಎಂದರೆ ಸರಿ . ಸಾಮಾನ್ಯವಾಗಿ ಒಬ್ಬ ವ್ಯಕ್ತಿ ಗಟ್ಟಿಯಾದ ಕಲ್ಲುಗಳ ಮೇಲೆ ಅಥವಾ ವಸ್ತುಗಳ

ಮೇಲೆ ಮುಮ್ಮುಖವಾಗಿ ಕೈ ಮುಂದೆ ಮಾಡಿ ಬಿದ್ದರೆ ನಿಪಿ-11 ರಲ್ಲಿ ನಮೂದು ಮಾಡಿರುವ ಗಾಯಗಳು ಆಗಬಹುದು ಎಂದರೆ ಸರಿ . ಗಾಯಾಳುವಿಗೆ ನಾನು ಎಕ್ಸರೇ ತೆಗೆದಿಲ್ಲ ಎಂದರೆ ಸರಿಯಲ್ಲ. ಪೊಲೀಸರಿಗೆ ಸಹಾಯ ಮಾಡಲು ನಿಪಿ-11 ಅನ್ನು ನೀಡಿದ್ದೇನೆ ಎಂದರೆ ಸರಿಯಲ್ಲ. ಫಿರ್ಯಾದುದಾರರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ .

**ಮರುವಿಚಾರಣೆಃ** ಇಲ್ಲ.

**ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**

ಓ ಹೇ ಕೇ ಸರಿ ಇದೆ ಎಂದು ಒಪ್ಪಿದ ಮೇರೆಗೆ,

ಎಂಟನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮೈಸೂರು, ಹುಣಸೂರು ಪೀಠ.